KASM620001832024

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಧಿಕಾರಿಗಳು ಸಾಗರ.

: ಉಪಸ್ಥಿತರು :

ಶ್ರೀ ಮಾದೇಶ ಎಂ.ವಿ., ಬಿ.ಕಾಂ., ಎಲ್.ಎಲ್.ಬಿ.,

ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಧಿಕಾರಿಗಳು – ಸಾಗರ.

ದಿನಾಂಕಃ 07 ನೇ ಜನವರಿ 2025

ಅಸಲು ದಾವಾ ಸಂಖ್ಯೆ: 67/2024

ವಾದಿ : ಕೆ.ಎನ್. ರಂಗನಾಥ
ಬಿನ್ ನಾಗೇಂದ್ರ ಭಟ್
65 ವರ್ಷ, ಗೌತಮಪುರ
ಆನಂದಪುರ ಹೋಬಳಿ,
ಸಾಗರ ತಾಲ್ಲೂಕು.

ವಿರುದ್ಧ

ಪ್ರತಿವಾದಿಯರು : ಕೆರೆಹಳ್ಳಿ ಇಟ್ಟಪ್ಪ

OS NO. 67/2024

ಬಿನ್ ಹುಚ್ಚಪ್ಪ 64 ವರ್ಷ
ಗೌತಮಪುರ
ಆನಂದಪುರ ಹೋಬಳಿ,
ಸಾಗರ ತಾಲ್ಲೂಕು.

ಮಧ್ಯಂತರ ಅರ್ಜಿ 1ರ ಪಕ್ಷಗಾರರು

ಅರ್ಜಿದಾರರು: ಕೆ.ಎನ್. ರಂಗನಾಥ

(ಪರವಾಗಿ ಶ್ರೀ ಎನ್.ಜಿ.ಕೆ. –ವಕೀಲರು)

ವಿರುದ್ಧ

ಎದುರುದಾರರು: ಕೆರೆಹಳ್ಳಿ ಇಟ್ಟಪ್ಪ

(ಪರವಾಗಿ ಶ್ರೀ ಎಂ ಎಸ್ ಜಿ ., ವಕೀಲರು).

Provision Under which the application is filed	Order 39 Rule 1 and 2 and r/w Sec.151 of CPC
Relief sought for	Temporary injunction order against the defendant, restraining him from interfering with the peaceful possession and enjoyment of the plaintiff over the suit schedule property till disposal of the suit.
The date on which the application is filed.	13-02-2024

Number of the application.	IA No.1
The date on which the objection is filed by defendant/ opponent.	11-06-2024
The date on which the orders were passed on the said application.	07-01-2025

ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ಸಹವಾಚಕ 151 ರ ಅಡಿಯಲ್ಲಿ ವಾದಿ ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆ 1 ರ ಮೇಲಿನ ಆದೇಶ

ವಾದಿಯು ಪ್ರಸ್ತುತ ದಾವೆಯನ್ನು ಪ್ರತಿವಾದಿಯ ವಿರುದ್ಧ ಶಾಶ್ವತ ಪ್ರತಿಬಂಧಕಾಜ್ಞೆ ಪರಿಹಾರಕ್ಕಾಗಿ ಸಲ್ಲಿಸಿರುತ್ತಾರೆ. ವಾದಿಯು ವಾದಪತ್ರದೊಂದಿಗೆ ಮಧ್ಯಂತರ ಅರ್ಜಿ ಸಂಖ್ಯೆ:1 ನ್ನು ಸಲ್ಲಿಸಿ, ದಾವೆಯು ಅಂತಿಮವಾಗಿ ತೀರ್ಮಾನವಾಗುವವರೆಗೆ ಪ್ರತಿವಾದಿಗಳೇ ಆಗಲಿ, ಅಥವಾ ಅವರ ಪರ ಇನ್ಯಾರೇ ಆಗಲೀ ದಾವಾ ಸ್ವತ್ತಿನ ವಾದಿಯ ಶಾಂತಿಯುತ ಸ್ವಾಧೀನಾನುಭವಕ್ಕೆ ಕಾನೂನುಬಾಹಿರ ಕೃತ್ಯದ ಮೂಲಕ ಅಡ್ಡಿ ಆತಂಕಪಡಿಸದಂತೆ, ತಾತ್ಕಾಲಿಕ ಪ್ರತಿಬಂಧಕಾಜ್ಞೆ ಆದೇಶವನ್ನು ಮಾಡಬೇಕೆಂದು ಕೋರಿರುತ್ತಾರೆ.

2. ಸಾಗರ ತಾಲ್ಲೂಕು, ಆನಂದಪುರ ಹೋಬಳಿ, ಗೌತಮಪುರ ಗ್ರಾಮ ಪಂಚಾಯ್ತಿ ಸ್ವತ್ತಿನ ಸಂಖ್ಯೆ :- 152400301600100942 ಆಗಿ, ಸ್ವತ್ತಿನ ಸಂಖ್ಯೆ ಗ್ರಾಮ

ಪಂಚಾಯ್ತಿ ದಾಖಲೆಗಳ ಪ್ರಕಾರ 319 ರಲ್ಲಿ ಬರುವ ಪೂರ್ವ–ಪಶ್ಚಿಮ 51.08 ಉತ್ತರ–ದಕ್ಷಿಣ 6.6 ಚ.ಮೀ ವಿಸ್ತೀರ್ಣದ ನಿವೇಶನ, ಇದಕ್ಕೆ ಚೆಕ್ಕುಬಂದಿ :

ಪೂರ್ವಕ್ಕೆ: ಕೆ ನಾಗೇಂದ್ರ ಭಟ್ ಮನೆ

ಪಶ್ಚಿಮಕ್ಕೆ: ಶಿಕಾರಿಪುರ ರಸ್ತೆ

ಉತ್ತರಕ್ಕೆ: ಕೆರೆಹಳ್ಳಿ ಇಟ್ಟಪ್ಪನ ಮನೆ

ದಕ್ಷಿಣಕ್ಕೆ: ಗುರುಮೂರ್ತಿ ಯವರ ಮನೆ.

ಈ ದಾವೆಯ ವಸ್ತು ವಿಷಯವಾಗಿದ್ದು, ಇನ್ನು ಮುಂದೆ ದಾವಾ ಸ್ವತ್ತು ಎಂದು ಸಂಭೋಧಿಸಲಾಗುವುದು.

3. ಸದರಿ ಮಧ್ಯಂತರ ಅರ್ಜಿ ಸಂಖ್ಯೆ 1 ರೊಂದಿಗೆ, ವಾದಿಯು ತನ್ನ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಸದರಿ ಪ್ರಮಾಣ ಪತ್ರದಲ್ಲಿ, ದಾವಾ ಶೆಡ್ಯೂಲ್ ಸ್ವತ್ತು ವಾದಿಗೆ ನೊಂದಾಯಿತ ಹಿಸ್ಸೆ ಪತ್ರದ ಮೂಲಕ ಬಂದ ಸ್ವತ್ತಾಗಿರುತ್ತದೆ. ಸದರಿ ಹಿಸ್ಸಾ ಪತ್ರವು ಸಾಗರ ಉಪನೊಂದಣಿ ಕಛೇರಿಯ ನೊಂದಣಿ ಪುಸ್ತಕದ ದಸ್ತಾವೇಜು ನಂ. ಎಸ್‌ಜಿಆರ್ –1–01208/2004–05 ಸಿಡಿ ನಂ. ಎಸ್‌ಜಿಆರ್‌ಡಿ 4 ನೇ ದರಲ್ಲಿ ದಿನಾಂಕ:–04– 12–2004 ರಂದು ನೊಂದಾಯಿತವಾಗಿರುತ್ತದೆ. ದಾವಾ ಶೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಗೌತಮಪುರ ಗ್ರಾಮ ಪಂಚಾಯ್ತಿಯಲ್ಲಿ ಸ್ವತ್ತಿನ ಸಂಖ್ಯೆ152400301600100942 ಆಗಿ, ಸ್ವತ್ತಿನ ಸಂಖ್ಯೆ ಗ್ರಾಮ ಪಂಚಾಯ್ತಿ ದಾಖಲೆಗಳ ಪ್ರಕಾರ 319 ಆಗಿ ಖಾತೆ ಬದಲಾವಣೆ ಆಗಿರುತ್ತದೆ. ಆ ಲಾಗಾಯ್ತು ಸದರಿ ದಾವಾ ಶೆಡ್ಯೂಲ್ ಸ್ವತ್ತಿಗೆ ವಾದಿಯೇ ಸರ್ಕಾರಕ್ಕೆ ಕಾಲ–ಕಾಲಕ್ಕೆ ಕಟ್ಟಬೇಕಾದ ಕರ–ಕಂದಾಯಗಳನ್ನು ಕಟ್ಟಿಕೊಂಡು ಸದರಿ ಶೆಡ್ಯೂಲ್ ಸ್ವತ್ತಿನ ಸ್ವಾಧೀನಾನುಭವವನ್ನು ತಾನೇ ಇಟ್ಟುಕೊಂಡು ಆಳಿ ಅನುಭವಿಸಿಕೊಂಡು ಬಂದ ಶೆಡ್ಯೂಲ್ ಸ್ವತ್ತಾಗಿರುತ್ತದೆ. ಪ್ರತಿವಾದಿಯು ದಾವಾ ಶೆಡ್ಯೂಲ್ ಸ್ವತ್ತಿನ ಉತ್ತರ ದಿಕ್ಕಿನ

ನಿವಾಸಿಗಳಾಗಿರುತ್ತಾರೆ. ವಾದಿಗೆ ಸೇರಿದ ದಾವಾ ಶೆಡ್ಯೂಲ್ ಸ್ವತ್ತಿನ ತಂತಿ ಬೇಲಿ ನಿರ್ಮಿಸಿದ್ದು, ಈ ತಂತಿ ಬೇಲಿಯನ್ನು ಪ್ರತಿವಾದಿಯು ಒತ್ತುವರಿ ಮಾಡುವ ಏಕೈಕ ಉದ್ದೇಶದಿಂದ ಮತ್ತು ತನ್ನ ಶೆಡ್ಯೂಲ್ ಸ್ವತ್ತಿನ ಉತ್ತರ ದಿಕ್ಕಿನಲ್ಲಿರುವ ಬೇಲಿಯನ್ನು ಕೀಳಲು ಹಾಗೂ ದಾವಾ ಸ್ವತ್ತು ವಿರೂಪಗೊಳಿಸಲು ಪ್ರಯತ್ನಿಸಿರುತ್ತಾರೆ. ಪ್ರತಿವಾದಿಯಾಗಲೀ, ಅಥವಾ ಅವರ ತರ್ಫಿನ ಜನರಿಗಾಗಲೀ, ದಾವಾ ಶೆಡ್ಯೂಲ್ ಸ್ವತ್ತಿನಲ್ಲಿ ಯಾವುದೇ ರೀತಿಯ ಹಕ್ಕು ಭಾದ್ಯತೆ ಇಲ್ಲದಿದ್ದರೂ ಸಹ ದಿನಾಂಕ : 05-02-2024 ರಂದು ವಾದಿ ಜಮೀನಿಗೆ ಸೇರಿದ ಉತ್ತರ ದಿಕ್ಕಿನ ಬೇಲಿಯನ್ನು ಕಿತ್ತು ಹಾಕಲು ಪ್ರಯತ್ನಿಸಿದ್ದು ವಾದಿ ಪ್ರತಿವಾದಿಯ ಕೃತ್ಯವನ್ನು ಬಹಳ ಕಷ್ಟಪಟ್ಟು ತಡೆದಿರುತ್ತಾರೆ. ಆದ್ದರಿಂದ, ನ್ಯಾಯಾಲಯದ ಸಹಾಯವಿಲ್ಲದೆ ಈ ರೀತಿಯ ಪ್ರತಿವಾದಿಯ ಕೃತ್ಯಗಳನ್ನು ತಡೆಯುವುದು ನನಗೆ ಕಷ್ಟಕರವಾಗಿರುತ್ತದೆ. ಆದಕಾರಣ, ಪ್ರತಿವಾದಿಯರ ವಿರುದ್ಧ ಮಧ್ಯಂತರ ಆದೇಶವನ್ನು ನೀಡಿ, ಮಧ್ಯಂತರ ಅರ್ಜಿ ಸಂಖ್ಯೆ 1 ನ್ನು ಪುರಸ್ಕರಿಸಬೇಕೆಂದು ಕೋರಿರುತ್ತಾರೆ.

4. ಪ್ರತಿವಾದಿಗೆ ನ್ಯಾಯಾಲಯದಿಂದ ಸಮನ್ಸ ಜಾರಿಯಾದ ನಂತರ, ಪ್ರತಿವಾದಿಯು ತಮ್ಮ ವಕೀಲರ ಮುಖಾಂತರ ನ್ಯಾಯಾಲಯದ ಮುಂದೆ ಹಾಜರಾಗಿ, ತಮ್ಮ ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತಾರೆ ಹಾಗೂ ದಿನಾಂಕ 11-06-24 ರಂದು ಒಂದು ಜ್ಞಾಪನವನ್ನು ಸಲ್ಲಿಸಿ ತಾನು ಸಲ್ಲಿಸಿದ ಪ್ರತಿವಾದ ಪತ್ರವನ್ನೇ ಮಧ್ಯಂತರ ಅರ್ಜಿ 1 ಕ್ಕೆ ತಕರಾರು ಎಂದು ಪರಿಗಣಿಸಬೇಕಾಗಿ ವಿನಂತಿಸಿಕೊಂಡಿರುತ್ತಾರೆ.

5. ಪ್ರತಿವಾದಿಯು ತನ್ನ ತಕರಾರಿನಲ್ಲಿ, ವಾದಿಯು ದಾವೆಯ ಚರ್ತುಗಡಿಯೊಳಗಿನ ಆಸ್ತಿಯ ಮಾಲೀಕನೇಂಬುದು ನಿಜ. ಆದರೆ ಸದ್ರಿ ಸೊತ್ತಿನ ಆಳತೆಯನ್ನು ವಾದಿಯ ರುಜುವಾತು ಪಡಿಸುವುದಾಗಿದೆ. ದಾವಾ ಸ್ವತ್ತು ಹಾಗೂ ಪ್ರತಿವಾದಿಯ ಸೊತ್ತು ಅಕ್ಕ ಪಕ್ಕದಲ್ಲಿವೆ. ವಾದಿಯು ಸೊತ್ತಿನ ಉತ್ತರ ದಿಕ್ಕಿಗೆ ಈ ಪ್ರತಿವಾದಿಯ

ವಾಸದ ಮನೆ, ಎಣ್ಣೆ ಗಿರಣಿ ಕಟ್ಟಡ ಆಡಿನಕೊಟ್ಟಿಗೆ ಮತ್ತು ಹಿತ್ತಲು ಇರುವುದು ನಿಜ. ಉಭಯತರರು ಸೊತ್ತುಗಳನ್ನು ಪಶ್ಚಿಮಾಅಭಿಮುಖವಾಗಿವೆ. ಉಭಯೇತರರ ಸ್ವತ್ತುಗಳ ಪೂರ್ವಕ್ಕೆ ಗ್ರಾಮ ಪಂಚಾಯ್ತಿ ರಸ್ತೆ ಇದೆ. ವಾದಿ ಪ್ರತಿವಾದಿಯರ ಸೊತ್ತುಗಳ ಮಧ್ಯ ಇರುವ ಕಲ್ಲು ಕಂಬದ ತಂತಿ ಬೇಲಿಯನ್ನು ಪ್ರತಿವಾದಿ ನಿರ್ಮಿಸಿದ್ದು, ಸದ್ರಿ ತಂತಿ ಬೇಲಿಯಿಂದ ದಕ್ಷಿಣಕ್ಕೆ ಅಂದರೆ ವಾದಿಯ ಸೊತ್ತಿನ ಕಡೆಗೆ ಪ್ರತಿವಾದಿ ಅತಿಕ್ರಮಿಸುವ ಪ್ರಯತ್ನ ಮಾಡಿರುವುದಿಲ್ಲ. ವಾದಿಯು ದಾವಾ ಸೊತ್ತಿನಲ್ಲಿದ್ದ ಹಳೆ ಮನೆಯನ್ನು ಕಳೆದ 6 ವರ್ಷದ ಹಿಂದೆ ಕಿತ್ತು ತೆಗೆದು ಊರಿನ ದೇವಸ್ತಾನದ ಹತ್ತಿರ ಗ್ರಾಮ ಠಾಣಾ ಜಾಗಾ ಅತಿಕ್ರಮಿಸಿ ಮನೆ ನಿರ್ಮಿಸಿಕೊಂಡು ವಾಸವಾಗಿದ್ದಾನೆ. ವಾದಿ ಪ್ರತಿವಾದಿಯರ ಆಸ್ತಿಗಳ ಇರುವಿಕೆಯ ನಿಖರವಾದ ಸ್ಥಿತಿಗತಿಯ ಮನವರಿಕೆಗಾಗಿ ಲಿಖಿತ ಹೇಳಿಕೆಯೊಂದಿಗೆ ಒಂದು ನಕ್ಷೆಯನ್ನು ಹಾಜರಿಪಡಿಸಿರುತ್ತಾರೆ. ಪ್ರತಿವಾದಿಯು ಕಳೆದ 40 ವರ್ಷಗಳ ಹಿಂದೆ ದಾವಾ ಸೊತ್ತಿನ ಉತ್ತರ ದಿಕ್ಕಿನ ಗ್ರಾಮಾ ಠಾಣಾ ಜಾಗಾದಲ್ಲಿ ಲಗ್ತು ನಕ್ಷೆಯಲ್ಲಿ ತೋರಿಸಿದಂತೆ, (38+66)/2 X 275 ಅಡಿ ಜಾಗವನ್ನು ಅತಿಕ್ರಮಿಸಿ ಸದ್ರಿ ಜಾಗದಲ್ಲಿ ಪಶ್ಚಿಮದ ರಸ್ತೆಗೆ ಮುಖಮಾಡಿ ವಾಸದ ಮನೆ ಮಳಿಗೆಯನ್ನು ನಿರ್ಮಿಸಿಕೊಂಡು ವಾಸದಮನೆ ಹಿಂಭಾಗದ ಜಾಗಾದಲ್ಲಿ ಚಿಕ್ಕ ದಾವಾ ಆಡಿನ ಕೊಟ್ಟಿಗೆ ಮತ್ತು ಅಡಿಕೆ ತೋಟ ಮಾಡಿಕೊಂಡು ನಿವೃತ್ತ ಜೀವನ ಕಳೆಯುತ್ತಿದ್ದಾನೆ. ಈ (38+66)/2 X 275 ಅಡಿ ವಿಸ್ತೀರ್ಣದ ಜಾಗದ ಪೈಕಿ ಪಶ್ಚಿಮ ದಿಕ್ಕಿನ ಶಿಕಾರಿಪುರ ಟಾರ್ ರಸ್ತೆಯಿಂದ ಪೂರ್ವಕ್ಕೆ 38 X 100 ಅಡಿ ಜಾಗದ ಮಾಲೀಕತ್ವದ ಬಗ್ಗೆ ಕಳೆದ 10-11-2003 ರಂದು ಗ್ರಾಮ ಪಂಚಾಯ್ತಿಯಿಂದ ಹಕ್ಕು ಪತ್ರ ನೀಡಿದ್ದು, ಮಿಕ್ಕಿದಂತೆ 66 X 175 ಅಡಿ ವಿಸ್ತೀರ್ಣದ ಜಾಗದ ಮೇಲೆ ಈ ಪ್ರತಿವಾದಿಯು ಕಳೆದ 40 ವರ್ಷಕ್ಕೂ ಹೆಚ್ಚು ಕಾಲದಿಂದ ಸ್ವಾದೀನದಲ್ಲಿದ್ದಾನೆ. ಪ್ರತಿವಾದಿಯು ಕಳೆದ 35 ವರ್ಷದ ಹಿಂದೆ ತನ್ನ ಸೊತ್ತಿನ ದಕ್ಷಿಣ ದಿಕ್ಕಿಗೆ ಅಂದರೆ

ವಾದಿ ಸೊತ್ತು ಮತ್ತು ತನ್ನ ಸೊತ್ತುಗಳ ಮಧ್ಯ ಗಡಿಯಾಗಿ ಪೂರ್ವ ಪಶ್ಚಿಮ 275 ಅಡಿ ಉದ್ದ ಮತ್ತು ತನ್ನ ಅನುಭವದ ಸೊತ್ತಿನ ಪೂರ್ವದಂಚಿನಲ್ಲಿ ಉತ್ತರ ದಕ್ಷಿಣವಾಗಿ 66 ಅಡಿವಿದ್ದ ಕಲ್ಲುಕಂಬ ತಂತಿ ಬೇಲಿಯನ್ನು ಮತ್ತು ಈ 66 X 175 ಆಡಿ ಜಾಗದಲ್ಲಿ ಉತ್ತರಕ್ಕೆ ಮೇಲೆ ಹೇಳಿದ ತಂತಿ ಬೇಲಿಯನು ನಿರ್ಮಿಸಿಕೊಂಡಿರುತ್ತಾರೆ. ಈ ಪ್ರತಿವಾದಿಯು ನಿವೃತ್ತ ಶಿಕ್ಷಕನಾಗಿದ್ದು ಮೇಲೆ ಹೇಳಿದ (38+66)/2 X 275 ಅಡಿ ಜಾಗದ ಹೊರತು ಪಡಿಸಿ ವಾದಿಯ ಸ್ವತ್ತನ್ನಾಗಲೀ, ಉತ್ತರ ದಿಕ್ಕಿನಲ್ಲಿರುವ ಕಾನ್ವೆಂಟ್ ಶಾಲೆ ಜಾಗದಲ್ಲಾಗಲೀ ಎನೊಂದು ಅತಿಕ್ರಮಣ ಮಾಡಿಲ್ಲ. ವಾದಿಯ ಜಾಗಾದಲ್ಲಿ ಮೊದಲು ಹಳೆಮನೆ ಇದ್ದಾಗ ಈ ಪ್ರತಿವಾದಿಯು ಗಡಿಬೇಲಿ ಪಕ್ಕಕ್ಕೆ ಅಂದರೆ ಉತ್ತರಕ್ಕೆ ಒಂದು ಕಕ್ಕಸು ಮನೆ ನಿರ್ಮಿಸಿಕೊಂಡಿದ್ದು, ಸ್ಧ್ರಿ ಕಕ್ಕಸು ಮನೆಯು ಸುಮಾರು 5 ವರ್ಷಗಳ ಹಿಂದೆ ಬಿದ್ದು ಹೋಗಿದೆ. ಆದರೆ ವಾದಿಯ ಕಳೆದ ಜನವರಿ ತಿಂಗಳಿನಲ್ಲಿ ಗಡಿ ಬೇಲಿಗೆ ತಾಗಿ ಹೊಸದಾಗಿ ಕಕ್ಕಸು ಮನೆ ನಿರ್ಮಿಸಲು ಪ್ರಯತ್ನಿಸಿದ್ದನು. ಈ ಸಂದರ್ಭದಲ್ಲಿ ಈ ಪ್ರತಿವಾದಿಯು ಉಭಯತರ ಗಡಿಯಿಂದ 2 ಆಡಿ ಖುಲ್ಲಾ ಜಾಗ ಬಿಟ್ಟು ಕಟ್ಟಡ ನಿರ್ಮಿಸುವಂತೆ ವಾದಿಗೆ ತಿಳಿ ಹೇಳಿದ್ದು, ಅಲ್ಲದೆ ಗ್ರಾಮ ಪಂಚಾಯ್ತಿಯವರು ಅಪ್ ಸೆಟ್ಟ ಜಾಗಾ ಬಿಡುವಂತೆ ತಿಳಿಸಿದ್ದರಿಂದಾಗಿ ವಾದಿಯು ಈ ಸ್ವರೂಪದಲ್ಲಿ ಸುಳ್ಳು ಕಾರಣ ನಿವೇದಿಸಿ, ಈ ದಾವೆ ತಂದಿರುತ್ತಾನೆ. ವಾಸ್ತವಿಕವಾಗಿ ಈ ದಾವೆಗೆ ಯಾವುದೇ ವ್ಯಾಜ್ಯ ಕಾರಣವಿರುದಿಲ್ಲ. ಆದಕಾರಣ, ದಾವೆಯನ್ನು ವಜಾಗೊಳಿಸಿ, ಮಧ್ಯಂತರ ಅರ್ಜಿ ಸಂಖ್ಯೆ1 ನ್ನು ವೆಚ್ಚಗಳ ಸಹಿತ ತಿರಸ್ಕರಿಸಬೇಕೆಂದು ಪ್ರತಿವಾದಿಯರು ಕೋರುತ್ತಾರೆ.

6. ಉಭಯ ಪಕ್ಷಗಾರರ ವಕೀಲರು ಮಂಡಿಸಿರುವ ವಾದವನ್ನು ಆಲಿಸಿದೆ, ಮತ್ತು ಪಕ್ಷಗಾರರು ನ್ಯಾಯಾಲಯಕ್ಕೆ ಸಲ್ಲಿಸಿರುವ ಈ ದಾವೆಗೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು.

ಈ ಸಂದರ್ಭದಲ್ಲಿ ನ್ಯಾಯಾಲಯದ ಪರಿಗಣನೆಗೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತವೆ.

ಅಂಶ –1 ವಾದಿಯು ತಮ್ಮ ಪರವಾಗಿ ಮೇಲ್ನೋಟದ ದಾವೆ ಇದೆ ಎಂದು ಸಾಭೀತುಪಡಿಸುವರೇ ?

ಅಂಶ –2 ಅನುಕೂಲತೆಯ ಒಲವು ವಾದಿಯ ಪರವಾಗಿದೆಯೇ?

ಅಂಶ –3 ವಾದಿಗೆ ಮಧ್ಯಂತರ ಅರ್ಜಿ ಸಂಖ್ಯೆ 1 ನ್ನು ಪುರಸ್ಕರಿಸದಿದ್ದರೆ, ತುಂಬಲಾರದ ನಷ್ಟ ಹಾಗೂ ಸರಿಪಡಿಸಲಾಗದ ಕ್ಷತಿ ಉಂಟಾಗುತ್ತದೆಯೇ?

ಅಂಶ –4 ಯಾವ ಆದೇಶ?

7. ಮೇಲಿನ ಅಂಶಗಳಿಗೆ ನ್ಯಾಯಾಲಯವು ಈ ಕೆಳಕಂಡಂತೆ ಉತ್ತರಿಸುತ್ತದೆ.

ಅಂಶಃ 1 **ಸಕಾರಾತ್ಮಕವಾಗಿ,**

ಅಂಶಃ 2 **ಸಕಾರಾತ್ಮಕವಾಗಿ,**

ಅಂಶಃ 3 **ಸಕಾರಾತ್ಮಕವಾಗಿ,**

ಅಂಶಃ 4 ಈ ಕೆಳಕಂಡ ಕಾರಣಗಳಿಗಾಗಿ ಅಂತಿಮ ಆದೇಶದಂತೆಃ–

:**ಕಾರಣಗಳು**:

8. **ಅಂಶಃ 1 ರಿಂದ 3** ಮೇಲಿನ ಅಂಶ–1 ರಿಂದ 3 ಒಂದಕ್ಕೊಂದು ಅಂತರ ಸಂಬಂಧ ಹೊಂದಿರುವುದರಿಂದ, ಚರ್ಚೆಯ ಪುನರಾವರ್ತನೆಯನ್ನು ತಪ್ಪಿಸಲು, ಎಲ್ಲಾ ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

9. ವಾದಿಯರ ಪರ ವಕೀಲರು ತಮ್ಮ ವಾದ ಮಂಡನೆಯಲ್ಲಿ, ದಾವಾ ಆಸ್ತಿಯು ದಿನಾಂಕ 4–12–2004 ರ ನೋಂದಾಯಿತ ವಿಭಾಗ ಪತ್ರದ ಮೂಲಕ ತನ್ನ ಹಿಸ್ಸೆಗೆ ಬಂದಿದ್ದು, ತಾನು ದಾವಾ ಆಸ್ತಿಯ ನಿರಂತರ ಸ್ವಾಧೀನಾನುಭದಲ್ಲಿರುತ್ತಾನೆ. ಪ್ರತಿವಾದಿಗೆ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ದಾವಾಸ್ವತ್ತಿನಲ್ಲಿ ಇಲ್ಲದಿದ್ದರೂ ಸಹ, ಸದರಿ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ತನ್ನ ಉತ್ತರ ದಿಕ್ಕಿನ ಬೇಲಿಯನ್ನು ನಾಶಪಡಿಸಲು ಮತ್ತು ವಾದಿಯ ಜಾಗವನ್ನು ಅತಿಕ್ರಮಿಸಲು ಪ್ರಯತ್ನಿಸುತ್ತಿರುವುದರಿಂದ ಮಧ್ಯಂತರ ಅರ್ಜಿ ಸಂಖ್ಯೆ 1 ನ್ನು ಪುರಸ್ಕರಿಸಲು ಅಗತ್ಯವಾದ ಎಲ್ಲಾ ಅಂಶಗಳನ್ನು ತಾನು ಸಾಭೀತುಪಡಿಸಿದ್ದು ತನ್ನ ಪರವಾಗಿ ಮೇಲ್ನೋಟದ ದಾವೆ ಇರುವುದರಿಂದ ಸದರಿ ಅರ್ಜಿಯನ್ನು ಪುರಸ್ಕರಿಸಬೇಕೆಂದು ವಾದಿಯು ಸಾಧನೆ ಮಾಡಿರುತ್ತಾರೆ.

10. ಪ್ರತಿವಾದಿ ಪರ ವಕೀಲರು ತಮ್ಮ ವಾದ ಮಂಡನೆಯಲ್ಲಿ, ವಾದಿಯು ವಾದ ಪತ್ರದಲ್ಲಿ ಹೇಳಿರುವ ಚತುರ್ಗಡಿಗೆ ಪೂರಕವಾದ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಅದೂ ಅಲ್ಲದೆ ಈ ಪ್ರತಿವಾದಿಯು 40 ವರ್ಷಗಳಿಂದ ದಾವಾ ಸ್ವತ್ತಿನ ಉತ್ತರ ದಿಕ್ಕಿನಲ್ಲಿ ಸರ್ಕಾರಿ ಜಾಗದಲ್ಲಿ ಸ್ವಾಧೀನವಿದ್ದು, ಅದರ ಪೈಕಿ ಭಾಗಶಃ ಜಾಗಕ್ಕೆ ಪಂಚಾಯ್ತಿಯಿಂದ ಹಕ್ಕು ಪತ್ರ ನೀಡಿದ್ದು, ಉಳಿದ ಕ್ಷೇತ್ರಕ್ಕೆ ತನ್ನ ಹಕ್ಕನ್ನು ಸ್ಥಿರವಾಗಿರಿಸಿಕೊಂಡು ಸದರಿ ಜಾಗದಲ್ಲಿ ನಿರಂತರ ಸ್ವಾಧೀನಾನುಭದಲ್ಲಿರುತ್ತಾನೆ. ಈ ಹಿಂದೆ ದಾವಾಸ್ವತ್ತಿನಲ್ಲಿ ಹಳೆಯ ಮನೆಯು

ಇದ್ದ ಸಂದರ್ಭದಲ್ಲಿ ಒಂದು ಶೌಚಾಲಯವು ಇತ್ತು. ಅದು ಶಿಥಿಲಗೊಂಡಿದ್ದರಿಂದ ಕಳೆದ ಜನವರಿಯಲ್ಲಿ ವಾದಿಯು ಹೊಸದಾಗಿ ಶೌಚಾಲಯವನ್ನು ನಿರ್ಮಿಸಲು ಪ್ರಯತ್ನಿಸಿದಾಗ, ಎರಡು ಅಡಿ ಅಫ್ ಸೆಟ್ ಜಾಗ ಬಿಟ್ಟು ಶೌಚಾಲಯದ ಕಟ್ಟಡ ನಿರ್ಮಿಸುವಂತೆ ವಾದಿಯು ಪ್ರತಿವಾದಿಗೆ ತಿಳುವಳಿಕೆ ಹೇಳಿದ ಸಂದರ್ಭದಲ್ಲಿ ಸುಳ್ಳು ವ್ಯಾಜ್ಯ ಕಾರಣ ಸೃಷ್ಟಿಸಿಕೊಂಡು ಈ ದಾವೆಯನ್ನು ಸಲ್ಲಿಸಿರುವುದರಿಂದ, ವಾದಿಯ ಪರವಾಗಿ ಯಾವುದೇ ಮೇಲ್ನೋಟದ ದಾವೆ ಅನುಕೂಲತೆಯ ಒಲವು ಇರುವುದಿಲ್ಲ. ಆದಕಾರಣ, ಮಧ್ಯಂತರ ಅರ್ಜಿ ಸಂಖ್ಯೆ 1 ನ್ನು ವೆಚ್ಚಗಳ ಸಹಿತ ವಜಾಗೊಳಿಸಬೇಕೆಂದು ಪ್ರತಿವಾದಿ ಪರ ವಕೀಲರು ಸಾದನೆ ಮಾಡಿರುತ್ತಾರೆ.

11. ವಾದಿ ಮತ್ತು ಪ್ರತಿವಾದಿಯರು ಸಲ್ಲಿಸಿರುವ ವಾದ ಮತ್ತು ಪ್ರತಿವಾದ ಪತ್ರಗಳು ಹಾಗೂ ಮಧ್ಯಂತರ ಅರ್ಜಿ ಸಂಖ್ಯೆ 1 ಹಾಗೂ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಯಿತು. ಅದೇರೀತಿಯಾಗಿ, ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 39 ನಿಯಮ 1 ಮತ್ತು 2 ನ್ನು ಗಮನದಲ್ಲಿರಿಸಿಕೊಂಡು, ಪ್ರಸ್ತುತ ಕೇಸಿನ ದಾಖಲೆಗಳನ್ನು ಪರಿಶೀಲನೆ ಮಾಡಿರುತ್ತದೆ. ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 39 ನಿಯಮ 1 ಮತ್ತು 2 ರಂತೆ ಪರಿಹಾರ ಪಡೆಯಲು ವಾದಿಯು ಅಗತ್ಯವಾದ ಮೂಲಭೂತ ಅಂಶಗಳಾದ ಮೇಲ್ನೋಟದ ದಾವೆ, ಅನುಕೂಲತೆಯ ಒಲವು, ಹಾಗೂ ತುಂಬಲಾರದ ನಷ್ಟ ಇವುಗಳನ್ನು ಕಡ್ಡಾಯವಾಗಿ ಸಾಭೀತುಪಡಿಸಬೇಕಾಗುತ್ತದೆ.

12. ಪ್ರತಿವಾದಿಯರು ವಾದ ಪತ್ರದ ಶೆಡ್ಯೂಲ್ ನಲ್ಲಿ ಕಾಣಿಸಿದ ಚೆಕ್ಕುಬಂದಿ ವ್ಯಾಪ್ತಿಯ ಒಳಗಿನ ಕ್ಷೇತ್ರದಲ್ಲಿನ ವಾದಿಯ ಮಾಲೀಕತ್ವ ಮತ್ತು ಸ್ವಾಧೀನವನ್ನು ಸ್ಪಷ್ಟವಾಗಿ ಒಪ್ಪಿಕೊಂಡಿರುತ್ತಾರೆ. ತನ್ನ ದಾವೆಗೆ ಪೂರಕವಾಗಿ ವಾದಿಯು ಗೌತಮಪುರ ಗ್ರಾಮ ಪಂಚಾಯ್ತಿಯ ಪಿಡಿಒ ರವರು ನೀಡಿರುವ ನಮೂನೆ 11 ಎ ಮತ್ತು 9 ನ್ನು

ಹಾಜರುಪಡಿಸಿರುತ್ತಾರೆ. ಸದರಿ ದಾಖಲೆಗಳಂತೆ ವಾದಿಯು ದಾವಾ ಸ್ವತ್ತಿನ ಮಾಲೀಕನಾಗಿ ಸ್ವಾಧೀನಾನುಭವದಲ್ಲಿರುವುದು ಕಂಡುಬರುತ್ತದೆ. ಅದೇರೀತಿಯಾಗಿ, ವಾದಿಯು ಹಾಜರುಪಡಿಸಿರುವ ವಿಭಾಗಪತ್ರದಂತೆ, ವಾದಿಗೆ ದಿನಾಂಕ 04-12-2004 ರಂದು ಕುಟುಂಬದ ಹಿಸ್ಸೆ ಮೂಲಕ ಬಂದಿರುತ್ತದೆ. ದಾವಾಸ್ವತ್ತಿನಲ್ಲಿನ ವಾದಿಯ ಮಾಲೀಕತ್ವವನ್ನು ಪ್ರತಿವಾದಿಯು ಸ್ಪಷ್ಟವಾಗಿ ಒಪ್ಪಿಕೊಂಡಿರುವುದರಿಂದ ದಾವಾಸ್ವತ್ತಿನ ಮಾಲೀಕತ್ವ ಮತ್ತು ವಾದಿಯ ಸ್ವಾಧೀನ ಕುರಿತು ಯಾವುದೇ ವಿವಾದವಿರುವುದಿಲ್ಲ.

13. ಪ್ರತಿವಾದಿಯು ಹೇಳಿದಂತೆ, ತಾನು ದಾವಾ ಸ್ವತ್ತಿನ ಉತ್ತರ ದಿಕ್ಕಿನಲ್ಲಿನ ಗ್ರಾಮಠಾಣ ಜಾಗದಲ್ಲಿ (38+66)/2 X 275 ಅಡಿ ಜಾಗವನ್ನು ಅತಿಕ್ರಮಿಸಿ ಅಲ್ಲಿ ಮನೆ, ಆಡಿನ ಕೊಟ್ಟಿಗೆ, ಅಡಿಕೆ ತೋಟ ಮಾಡಿಕೊಂಡಿರುವುದಾಗಿ ಹೇಳಿರುತ್ತಾರೆ. ಸದರಿ ಕ್ಷೇತ್ರದ ಪೈಕಿ 38*100 ಅಡಿ ಜಾಗದ ಮಾಲೀಕತ್ವವನ್ನು ದೃಢೀಕರಿಸಿ ಪ್ರತಿವಾದಿಗೆ ಗ್ರಾಮ ಪಂಚಾಯ್ತಿಯಿಂದ ಹಕ್ಕು ಪತ್ರವನ್ನು ನೀಡಿರುತ್ತದೆ. ಈ ಬಗ್ಗೆ ಮುಂಜೂರಾತಿ ಪತ್ರದ ದೃಢೀಕೃತ ನಕಲನ್ನು ಪ್ರತಿವಾದಿಯು ಹಾಜರುಪಡಿಸಿರುತ್ತಾರೆ. ಅದೇರೀತಿಯಾಗಿ, ಕಂದಾಯ ಪಾವತಿ ರಶೀದಿಗಳನ್ನು ಸಹ ಹಾಜರುಪಡಿಸಿರುತ್ತಾರೆ. ಆದಕಾರಣ, ಸದರಿ ಪ್ರತಿವಾದಿಯ ಒಟ್ಟು ಕ್ಷೇತ್ರದ ಪೈಕಿ 38*100 ಅಡಿ ಜಾಗದ ಬಗ್ಗೆ ಪ್ರತಿವಾದಿಯು ಮಾಲೀಕನು ಎಂಬ ಬಗ್ಗೆ ಯಾವುದೇ ವಿವಾದ ಇರುವುದಿಲ್ಲ. ಆದರೆ, ಉಳಿದ 66*175 ಅಡಿ ಜಾಗದಲ್ಲಿ ಪ್ರತಿವಾದಿಯು ಅನದಿಕೃತ ಸ್ವಾಧೀನ ಇರುವುದಾಗಿ ತನ್ನ ಪ್ರತಿವಾದದ ಪತ್ರದಲ್ಲಿ ಹೇಳಿರುತ್ತಾರೆ. ಆದಕಾರಣ, ಸದರಿ ಸ್ವತ್ತು ಪ್ರತಿವಾದಿಯು ಅನಧಿಕೃತವಾಗಿ ಸ್ವಾಧೀನದಲ್ಲಿರುವುದರಿಂದ ಆ ಕ್ಷೇತ್ರವು ದಾವಾ ಸ್ವತ್ತಿನಲ್ಲಿ ಸೇರಿದೆಯೇ ಅಥವಾ ಇಲ್ಲವೇ ಎಂಬುದನ್ನು ಈ ಹಂತದಲ್ಲಿ ನಿರ್ಧರಿಸಲು ಸಾಧ್ಯವಿಲ್ಲ. ಅದೂಅಲ್ಲದೆ

ಪ್ರತಿವಾದಿಯು ವಾದಿಯ ಮಾಲೀಕತ್ವ ಮತ್ತು ಸ್ವಾಧೀನವನ್ನು ಒಪ್ಪಿಕೊಂಡಿರುವುದರಿಂದ, ಈ ಹಂತದಲ್ಲಿ ವಾದಿಯು ತನ್ನ ಪರವಾಗಿ ಮೇಲ್ನೋಟದ ದಾವೆ ಇದೆ ಎಂಬುದನ್ನು ಸಾಭೀತುಪಡಿಸಿರುತ್ತಾರೆ. ಆದ್ದರಿಂದ, ವಾದಿಯ ಹಕ್ಕನ್ನು ಸಂರಕ್ಷಿಸುವುದು ಅಗತ್ಯವಾಗಿರುತ್ತದೆ. ಆದಕಾರಣ, ವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ .1 ನ್ನು ಪುರಸ್ಕರಿಸುವುದು ಸೂಕ್ತ ಎಂದು ನ್ಯಾಯಾಲಯವು ಅಭಿಪ್ರಾಯ ಪಟ್ಟಿರುತ್ತದೆ. ಆದಕಾರಣ, ಈ ಹಂತದಲ್ಲಿ ಪ್ರತಿವಾದಿಯರು ಒಂದುವೇಳೆ ದಾವಾ ಆಸ್ತಿಯ ವಾದಿಯ ಸ್ವಾಧೀನಕ್ಕೆ ಅಡ್ಡಿ ಉಂಟುಮಾಡಿದಲ್ಲಿ, ವಾದಿಗೆ ನಷ್ಟ ಹಾಗೂ ಹಾನಿ ಉಂಟಾಗುತ್ತದೆ. ಅದೇರೀತಿಯಾಗಿ, ವಾದಿಯರ ಪರವಾಗಿ ಈ ಮಧ್ಯಂತರ ಅರ್ಜಿ ಪುರಸ್ಕರಿಸಿದ್ದಲ್ಲಿ ಪ್ರತಿವಾದಿಯರಿಗೆ ಯಾವುದೇ ತೊಂದರೆಯಾಗುವುದಿಲ್ಲ. ಆದುದರಿಂದ, ಈ ದಾವೆಯು ಅಂತಿಮವಾಗಿ ನಿರ್ಣಯವಾಗುವವರೆಗೆ ಮಧ್ಯಂತರ ಅರ್ಜಿ ಸಂಃ1 ನ್ನು ಪುರಸ್ಕರಿಸುವುದು ಸೂಕ್ತ ಎಂದು ಅಭಿಪ್ರಾಯಪಡುತ್ತಾ, ಈ ಮೇಲಿನ ಅಂಶ 1 ರಿಂದ 3 ನ್ನು ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

14. **ಅಂಶ–4** : ಅಂಶ 1 ರಿಂದ 3 ರಲ್ಲಿನ ಮೇಲಿನ ಚರ್ಚೆಯಿಂದ ಬಂದಂತಹ ಉತ್ತರದಿಂದ ಈ ಕೆಳಕಂಡಂತೆ,

ಆದೇಶ

ವಾದಿಯರು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2, ಸಹವಾಚಕ ಕಲಂ 151 ರ ಅಡಿಯಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆ–1 ನ್ನು ಪುರಸ್ಕರಿಸಲಾಗಿದೆ.

ಮುಂದುವರೆದು, ಪ್ರತಿವಾದಿಯಾಗಲೀ ಅಥವಾ ಅವರ ಪರ ಯಾರೇ ಆಗಲೀ, ವಾದಿಯ ದಾವಾ ಸ್ವತ್ತಿನ ಸ್ವಾಧೀನಕ್ಕೆ ಯಾವುದೇ ರೀತಿಯಲ್ಲಿ ಅಡ್ಡಿ ಆತಂಕಪಡಿಸದಂತೆ ದಾವೆ ಅಂತಿಮವಾಗಿ ನಿರ್ಣಯವಾಗುವರೆಗೆ ತಾತ್ಕಾಲಿಕವಾಗಿ ಪ್ರತಿಬಂಧಿಸಲಾಗಿದೆ.

ವೆಚ್ಚಗಳ ಬಗ್ಗೆ ಯಾವುದೇ ಆದೇಶ ಇಲ್ಲಾ.

(ಈ ಆದೇಶವನ್ನು ಶೀಘ್ರಲಿಪಿಗಾರರಿಂದ ನೇರವಾಗಿ ಕಂಪ್ಯೂಟರಿಗೆ ಅಳವಡಿಸುವಂತೆ ಉಕ್ತಲೇಖನ ನೀಡಿದ್ದು, ನಂತರ ನಾನು ಅದನ್ನು ಓದಿ ತಪ್ಪುಗಳನ್ನು ತಿದ್ದಿದ, ನಂತರ ಈ ದಿನ ಅಂದರೆ 07 ನೇ ಜನವರಿ 2025 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿರುತ್ತೇನೆ)

(ಮಾದೇಶ ಎಂ.ವಿ.,)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಸಾಗರ.

***

07/01/2025
plaintiff by NGK
defendant by MSG
for orders on IA-1

(ಆದೇಶವನ್ನು ತೆರೆದ ನ್ಯಾಯಾಲಯದಲ್ಲಿ ಪ್ರತ್ಯೇಕ ಆದೇಶದೊಂದಿಗೆ ಘೋಷಿಸಲಾಯಿತು.)

ಆದೇಶ

ವಾದಿಯರು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2, ಸಹವಾಚಕ ಕಲಂ 151 ರ ಅಡಿಯಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆ-1 ನ್ನು ಪುರಸ್ಕರಿಸಲಾಗಿದೆ.

ಮುಂದುವರೆದು, ಪ್ರತಿವಾದಿಯಾಗಲೀ ಅಥವಾ ಅವರ ಪರ ಯಾರೇ ಆಗಲೀ, ವಾದಿಯ ದಾವಾ ಸ್ವತ್ತಿನ ಸ್ವಾಧೀನಕ್ಕೆ ಯಾವುದೇ ರೀತಿಯಲ್ಲಿ ಅಡ್ಡಿ ಆತಂಕಪಡಿಸದಂತೆ ದಾವೆ ಅಂತಿಮವಾಗಿ ನಿರ್ಣಯವಾಗುವರೆಗೆ ತಾತ್ಕಾಲಿಕವಾಗಿ ಪ್ರತಿಬಂಧಿಸಲಾಗಿದೆ.

ವೆಚ್ಚಗಳ ಬಗ್ಗೆ ಯಾವುದೇ ಆದೇಶ ಇಲ್ಲಾ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ., ಸಾಗರ.

(issues framed)

Issues framed.

For list of witness and

plaintiff evidence, by

Prl.C.J and JMFC., Sagar.